# ವಿಷಾದಯೋಗ

ಭಗವದ್ಗೀತೆಯ ಮೊದಲ ಅಧ್ಯಾಯವನ್ನು 'ಅರ್ಜುನ ವಿಷಾದ ಯೋಗ' ಎಂದು ಹೆಸರಿಸಲಾಗಿದೆಯಷ್ಟೆ? ಮಹಾಭಾರತದಲ್ಲಿ ಅತ್ಯುನ್ನತ ಪರಾಕ್ರಮಿಯೆಂದು ಹೆಸರು ಮಾಡಿದ ಅರ್ಜುನ ಕುರುಕ್ಷೇತ್ರದಲ್ಲಿ ಸನ್ನಿಹಿತವಾದ ನಿರ್ಣಾಯಕ ಯುದ್ಧದ ಪ್ರಾರಂಭದಲ್ಲಿಯೇ ಯುದ್ಧ ವೈರಾಗ್ಯ ತಾಳಿ, ವಿಷಾದಕ್ಕೆ ಒಳಗಾದುದನ್ನು ಈ ಅಧ್ಯಾಯ ವರ್ಣಿಸುತ್ತದೆ. ಈ ವಿಷಾದವೇ ಭಗವದ್ಗೀತೆಯ ಹುಟ್ಟಿಗೆ ಕಾರಣವಾಗುತ್ತದೆ. ಕುರುಕ್ಷೇತ್ರ ಯುದ್ಧ ಪಾಂಡವ ಕೌರವರಿಬ್ಬರ ಪಾಲಿಗೂ ಆಕಸ್ಮಿಕ ಅಥವಾ ಅನಿರೀಕ್ಷಿತವೇನಲ್ಲ. ಶ್ರೀಕೃಷ್ಣನಂಥ ಮಹಾ ಮುತ್ಸದ್ದಿ– ದುರ್ಯೋಧನನೊಂದಿಗೆ ಮಾಡಿದ ಸಂಧಾನ ವಿಫಲವಾಗಿ, ಯುದ್ಧ ಅನಿವಾರ್ಯವೆನ್ನಿಸಿದೆ. ಉಭಯ ಬಣದವರೂ ತಮ್ಮ ತಮ್ಮ ಬಂಧುಗಳ, ಹಿತೈಷಿಗಳ ನೆರವನ್ನು ಪಡೆದು, ಸಕಲ ಸಿದ್ಧತೆಗಳನ್ನು ಮಾಡಿಕೊಂಡು, ಹದಿನೆಂಟು ಅಕ್ಷೋಹಿಣೀ ಸೈನ್ಯದೊಂದಿಗೆ ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಮುಖಾ ಮುಖಿಯಾಗಿದ್ದಾರೆ. ಇಂಥ ಉತ್ಕಟ ಸನ್ನಿವೇಶದಲ್ಲಿ ಪಾಂಡವ ಪಕ್ಷದ ಪ್ರಮುಖ ನೇತಾರ ಅರ್ಜುನ ಗ್ಲಾನಿಗೊಳಗಾಗಿ ಯುದ್ಧ ಪ್ರಸಕ್ತಿಯಿಂದ ದೂರ ಸರಿಯುವ ಮಾತನ್ನಾಡುತ್ತಾನೆ. ತನ್ನ ಮುಂದಿರುವ ಕೌರವ ಸೈನ್ಯವನ್ನು ವಿವರವಾಗಿ ನೋಡಿದಾಗ ಉಂಟಾದ ಭಾವಪಲ್ಲಟವೇ ಇದಕ್ಕೆ ಕಾರಣ. ಆ ಮಹಾಸೇನೆಯಲ್ಲಿ ತನ್ನನ್ನು ಎತ್ತಿ ಆಡಿಸಿ, ಬುದ್ಧಿ ಹೇಳಿ, ಬೆಳೆಸಿದ ವೃದ್ಧ ಪಿತಾಮಹ ಭೀಷ್ಮರಿದ್ದಾರೆ; ವಿದ್ಯೆ ಕಲಿಸಿದ ಆಚಾರ್ಯ ದ್ರೋಣರಿದ್ದಾರೆ; ಸೋದರಮಾವ ಶಲ್ಯ ನಿದ್ದಾನೆ; ಜ್ಞಾತಿಗಳಾದ ಕೌರವರಿದ್ದಾರೆ; ಇನ್ನಿತರ ಬಂಧುಗಳೂ ಆತ್ಮೀಯರೂ ಇದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಅಂಥವರನ್ನೆಲ್ಲಾ ಹತ್ಯೆ ಮಾಡುವುದು ಘೋರ ಪಾಪ ಎನ್ನಿಸುತ್ತದೆ ಅರ್ಜುನನಿಗೆ. ಜೊತೆಗೆ, ಯುದ್ಧೋತ್ತರ ಪರಿಣಾಮದಿಂದಾಗಿ ಧರ್ಮಗ್ಲಾನಿ, ಸಾಮಾಜಿಕ ವೈಪರೀತ್ಯ ಮುಂತಾದವುಗಳೂ ಘಟಿಸುತ್ತವೆ ಎಂದೂ ಆತ ಚಿಂತಿಸುತ್ತಾನೆ. ಹೀಗೆ ಕಳವಳಗೊಂಡು ಕ್ಷೋಭೆಗೊಳಗಾದ ಅರ್ಜುನನ ಕೈಯಿಂದ ಗಾಂಡೀವ ಜಾರಿಬೀಳುತ್ತದೆ, ಆತ ಗದ್ಗದಿತ ಧ್ವನಿಯಲ್ಲಿ 'ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ' (ಕೃಷ್ಣ, ನನಗೆ ವಿಜಯಾಪೇಕ್ಷೆ ಇಲ್ಲ; ರಾಜ್ಯವೂ ಬೇಡ; ಸುಖ ವೈಭವಗಳೂ ಬೇಡ) ಎಂದು ಹೇಳಿ, ಶಸ್ತ್ರ ತ್ಯಾಗಮಾಡಿ, ರಥದಲ್ಲಿ ಖಿನ್ನನಾಗಿ ಕುಳಿತುಕೊಳ್ಳುತ್ತಾನೆ.

ಅರ್ಜುನನ ಯುದ್ಧ ಜಿಹಾಸೆಗೆ ಕಾರಣಗಳಾದರೂ ಯಾವುವು? ಅರ್ಜುನನೇ ಸೂಚಿಸಿದಂತೆ ಬಂಧುಹತ್ಯೆ, ಪಾಪಭೀತಿ, ಹಿಂಸೆ, ವರ್ಣಸಂಕರವಾಗುವ ಸಾಧ್ಯತೆ –ಇತ್ಯಾದಿಗಳು ಅದಕ್ಕೆ ಮುಖ್ಯ ಕಾರಣಗಳು. ಆದರೆ ವಾಸ್ತವವಾಗಿ ಇವೆಲ್ಲವೂ ಅರ್ಜುನ ತನ್ನನ್ನು ಸಮರ್ಥಿಸಿಕೊಳ್ಳಲು ಹೇಳಿಕೊಳ್ಳುವ ನೆಪಗಳೇ ಹೊರತು, ಆತನ ಆಳ ಮನಸ್ಸಿನಿಂದ ಬಂದಂಥವಲ್ಲ. ಏಕೆಂದರೆ ಅನಿವಾರ್ಯವಾಗಿರುವ ಕುರುಕ್ಷೇತ್ರ ಮಹಾ ಸಮರ ಬಹುತೇಕ ಪೂರ್ವನಿಶ್ಚಿತ. ಅದರಲ್ಲಿ ಭೀಷ್ಮ ದ್ರೋಣರಂಥ ಹಿರಿಯರೂ ಬಂಧುಮಿತ್ರರೂ ತನ್ನ ಎದುರಾಳಿಗಳಾಗಲಿರುವ ವಿಚಾರ ಅರ್ಜುನನಿಗೆ ತಿಳಿಯದ ಸಂಗತಿಯಲ್ಲ. ಈಗಾಗಲೇ ಹಲವು ಯುದ್ಧಗಳಲ್ಲಿ ಪಾಲ್ಗೊಂಡಿದ್ದ ಆತನಿಗೆ ಯುದ್ಧದ ಪರಿಣಾಮಗಳ ಬಗ್ಗೆಯೂ ಅರಿವಿಲ್ಲದೇ ಇಲ್ಲ, ಆದರೆ ಕುರುಕ್ಷೇತ್ರದ ರಣರಂಗದಲ್ಲಿ ಮಾತ್ರ ಅರ್ಜುನ ಇವೆಲ್ಲವನ್ನೂ ಮರೆತು, ಏಕಾಏಕಿ ವಿಷಾದಕ್ಕೆ ಒಳಗಾಗುತ್ತಾನೆ! ಅದೊಂದು ಹೃದಯ ದೌರ್ಬಲ್ಯದಿಂದುಂಟಾದ ಅವಿಚಾರಿತ ಭಾವಾವೇಶ ಲಹರಿ (Impulse)ಯೇ ಹೊರತು, ಬೌದ್ಧಿಕ ಜಿಜ್ಞಾಸೆಯ ಪರಿಣಾಮವಲ್ಲ, ಆದ್ದರಿಂದಲೇ ಶ್ರೀಕೃಷ್ಣ ಅರ್ಜುನನದು 'ಹುಸಿ ಪ್ರಜ್ಞಾವಾದ'ವೆಂದು ಛೇಡಿಸುತ್ತಾನೆ.

ವಿಷಾದಯೋಗಿಯಾದ ಅರ್ಜುನ ನಮ್ಮೆಲ್ಲರನ್ನೂ ಪ್ರತಿನಿಧಿಸುತ್ತಾನಲ್ಲವೆ? ಅನೇಕ ಬಾರಿ, ಬದುಕಿನ ನಿರ್ಣಾಯಕ ಘಟ್ಟಗಳಲ್ಲಿ ನಮ್ಮಲ್ಲೂ ಇಂಥ ವಿಷಾದ ಆವರಿಸಿಕೊಳ್ಳುತ್ತದೆ. ನಮ್ಮ ಗುರಿ ಇನ್ನೇನು ಹತ್ತಿರದಲ್ಲಿದೆ ಎಂಬ ಘಟ್ಟದಲ್ಲಿ ನಾವೂ ಅರ್ಜುನನಂತೆ ಭಾವಾವೇಗಕ್ಕೆ ಒಳಗಾಗಿ, ಗುರಿಯಿಂದ ವಿಮುಖರಾಗುತ್ತೇವೆ. (ಪರೀಕ್ಷೆಗಳು ಹತ್ತಿರ ಬಂದಾಗ ಬಹಳಷ್ಟು ಮಂದಿ ವಿದ್ಯಾರ್ಥಿಗಳು ವಿಷಾದಯೋಗಿ ಆಗುತ್ತಾರಲ್ಲವೆ?) ಸೋಲಿನ ಭಯ, ಅವಮಾನದ ಭಯ, ನೋವಿನ ಭಯ– ಇಂಥ ಭಯಗಳನ್ನು ಕಲ್ಪಿಸಿಕೊಂಡು ನಾವು ಅಧೀರರಾಗಿ, ಕರ್ತವ್ಯಕ್ಕೆ ಬೆನ್ನು ಹಾಕಿ, ಪಲಾಯನ ಮಾಡುತ್ತೇವೆ. ಅಷ್ಟು ಮಾತ್ರವಲ್ಲ; (ಕೈಲಾಸಂ ಹೇಳಿದಂತೆ) ಇತರರನ್ನೂ ನಮ್ಮೊಂದಿಗೆ ಸೇರಿಸಿಕೊಂಡು, Come on, let us be miserable! (ಬನ್ನಿ, ಒಟ್ಟಿಗೆ ಗೋಳಾಡೋಣ!) ಎಂದು ಗೋಗರೆಯುತ್ತೇವೆ. ಅಂಥ ಸಂದರ್ಭಗಳಲ್ಲಿ 'ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ...' (ಮನಸ್ಸಿನಲ್ಲಿನ ಕ್ಷುದ್ರ ದೌರ್ಬಲ್ಯವನ್ನು ಕಿತ್ತೆಸೆದು, ಎದ್ದುನಿಲ್ಲು) ಎಂಬ ಆತ್ಮಶಕ್ತಿಯನ್ನು ಉದ್ದೀಪಿಸುವ ಶ್ರೀಕೃಷ್ಣನ ಮಾತು ನೆನಪಾಗಬೇಕು!

■ ವೈನತೇಯ

## ಮಾತೇ ಮುತ್ತು

★ ಅಜ್ಞಾನವನ್ನು ಮುಚ್ಚಿಡಲು ಬ್ರಹ್ಮನು 'ಮೌನ'ವೆಂಬ ಒಂದು ವಿಶೇಷ ಗುಣವನ್ನು ನಮಗೆ ಕೊಟ್ಟಿರುತ್ತಾನೆ. ಅದಕ್ಕೂ ಹೆಚ್ಚಾಗಿ ಎಲ್ಲವನ್ನೂ ತಿಳಿದವರ ಸಭೆಯಲ್ಲಿ ಪಂಡಿತರಲ್ಲದವರಿಗೆ ಮೌನವೇ ಭೂಷಣ.

–ನೀತಿ ಶತಕ

★ ಹೆಣ್ಣು ಒಡವೆ ವಸ್ತ್ರಗಳಿಂದ ಸಂತುಷ್ಟಳಾಗಿದ್ದರೆ ಆ ಕುಟುಂಬವೇ ನಲಿಯುತ್ತ ಇರುತ್ತದೆ! ಹೆಣ್ಣು ಅಶಾಂತಳಾಗಿದ್ದರೆ ಆ ಕುಟುಂಬವು ಶೋಭಿಸುವುದಿಲ್ಲ.

–ಮನುಸ್ಮೃತಿ

★ ಹೆಂಗಸರು ಯಾವ ಬಗೆಯ ಶಿಕ್ಷಣ ಇಲ್ಲದೆಯೂ– ಜಾಣರೂ, ಸಮರ್ಥರೂ ಆಗಿರುತ್ತಾರೆ.

–ಶಾಕುಂತಲ (ಕಾಳಿದಾಸ)

★ ಪತಿತರು, ದುರ್ಬಲರಿಗಾಗಿ ಮಾತನಾಡದಿರುವವನು ಗುಲಾಮ. ಅತ್ಯಂತ ಅಲ್ಪಮತ ಹೊಂದಿರುವ ಕಾರಣಕ್ಕಾಗಿ ಸತ್ಯದ ಪಕ್ಷ ವಹಿಸದಿರುವವನು ಗುಲಾಮ.

–ಬಿ.ಆರ್.ಅಂಬೇಡ್ಕರ್

★ ಪ್ರತಿಯೊಂದು ವಿಪತ್ತು ಒಬ್ಬನನ್ನು ದೃಢನನ್ನಾಗಿಸಿದರೆ; ಮತ್ತೊಬ್ಬನನ್ನು ದುರ್ಬಲನನ್ನಾಗಿಸುತ್ತದೆ, ಶಿಥಿಲನನ್ನಾಗಿಸುತ್ತದೆ.

–ಲೆನಿನ್

★ ಶೂರನೂ, ವಿದ್ಯೆಯನ್ನು ಸಂಪಾದಿಸಿದವನೂ, ಸೇವಿಸಲು ಬಲ್ಲವನೂ –ಈ ಮೂವರು ಭೂಮಿಯಲ್ಲಿ ಚಿನ್ನವನ್ನು ಪಡೆಯುತ್ತಾರೆ.

–ಪಂಚತಂತ್ರ

★ ಸರಿ ತಪ್ಪುಗಳನ್ನು ವಿಂಗಡಿಸುವ ರಾಜನು ಲೋಕದಲ್ಲಿಲ್ಲದಿದ್ದರೆ, ಯಾವುದೂ ಏನೋ ತಿಳಿಯದೇ ಹೋದೀತು. ಆಹಾ! ಎಲ್ಲವೂ ಕತ್ತಲೆಯಿಂದ ಮುಚ್ಚಿಹೋದೀತು.

–ರಾಮಾಯಣ

★ ಅಸಮಾನತೆಯಿಂದ ಹಿಂಸೆ ಹುಟ್ಟಿಕೊಳ್ಳುತ್ತದೆ; ಸಮಾನತೆಯಿಂದ ಅಹಿಂಸೆ ಹುಟ್ಟಿಕೊಳ್ಳುತ್ತದೆ.

–ಮಹಾತ್ಮ ಗಾಂಧೀಜಿ

★ ಮಹಾನ್ ನದಿಗಳ ಉಗಮ ಚಿಕ್ಕದಾಗಿರುತ್ತದೆ. ಅಂತೆಯೇ ಮಹಾನ್ ಘಟನೆಗಳ ಕಾರಣವೂ ಅತ್ಯಂತ ಕ್ಷುದ್ರದ್ದಾಗಿರುತ್ತದೆ.

–ಸ್ವಿಫ್ಟ್

★ ಶ್ರೀಮಂತ ಮತ್ತು ಬಡವ ಎಲ್ಲರಿಗೂ ಅಗತ್ಯತೆ ಕಾಡುತ್ತದೆ. ಆದ್ದರಿಂದ ಎಲ್ಲರೂ ಬಡವರೇ. ಶ್ರೀಮಂತರ ಅಗತ್ಯಗಳು ಹೆಚ್ಚು. ಆದ್ದರಿಂದ ಬೇರೆಯವರಿಗಿಂತ ಅವನು ದೀನನಾಗಿರುತ್ತಾನೆ.

–ಶೇಖ್‌ಸಾದಿ

★ ಕಠಿಣತಮವಾದ ಶಾಸ್ತ್ರಗಳ ಜ್ಞಾನವನ್ನು ಹೊಂದಿರುವವರೂ, ಬಹಳ ವಿಚಾರಗಳನ್ನು ಕೇಳಿ ತಿಳಿದುಕೊಂಡವರೂ, ಇತರರ ಸಂಶಯಗಳನ್ನು ಹೋಗಲಾಡಿಸುವವರು ಆಗಿದ್ದರೂ ಸಹ ಲೋಹದ ಮೋಹಕ್ಕೆ ಒಳಗಾಗಿಬಿಟ್ಟರೆ ಕಷ್ಟಕ್ಕೊಳಗಾಗುತ್ತಾರೆ.

–ಹಿತೋಪದೇಶ

★ ಮನುಷ್ಯ ತನ್ನ ಶಕ್ತಿ ಮೀರಿದುದನ್ನು ಸಾಧಿಸುವ ಪ್ರಯತ್ನ ನಡೆಸಬೇಕು.

–ರಾಬರ್ಟ್ ಬ್ರೌನಿಂಗ್